**<u>ಸಾಕ್ಷಿಗೆ ದಿನಾಂಕ 13-05-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಂದುವರೆದ ಪಾಟೀಸವಾಲುಃ **ಅರ್ಜಿದಾರರ ಪರ ಶ್ರೀ ಬಿ ಎಸ್ ಎಂ ವಕೀಲರಿಂದಃ**

1. ಮೃತ ರೂಪಶ್ರೀ ಮತ್ತು ನನ್ನ ವಿವಾಹವಾದ ನಂತರ ಮೃತ ರೂಪಶ್ರೀ ಮದುವೆಯಾದ ಮೂರು ತಿಂಗಳವರೆಗೆ ನನ್ನ ಜೊತೆಗೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ರೂಪಶ್ರೀ ರವರ ಅಂತ್ಯಸಂಸ್ಕಾರಕ್ಕೆ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕುರಿತಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ರೂಪಶ್ರೀ ರವರು ಮೃತಪಟ್ಟ ನಂತರ ಎಂ ಸಿ ನಂ.291/2021 ಪ್ರಕರಣವು ಯಾವುದೇ ತೀರ್ಪು ಇಲ್ಲದೇ ವಜಾಗೊಂಡಿರುತ್ತದೆ ಎಂದರೆ ಸರಿ.

2. ಮೃತ ರೂಪಶ್ರೀ ರವರ ಜೊತೆಯಲ್ಲಿ ನಾನು ವಾಸಿಸದೇ ಇರುವುದರಿಂದ ನಾನು ಪರಿಹಾರದ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಅರ್ಜಿದಾರರು ಮಾತ್ರ ಈ ಅರ್ಜಿಯ ಪರಿಹಾರದ ಹಣ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಏಕೈಕ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರು. ಆದ್ದರಿಂದ ಅವರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು-ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**